ಹಗ್ಗದ ಕುಣಿಕೆಯಲ್ಲಿ ನೇತಾಡಿದಂತೆನಿಸಿ, ಗಪ್ಪೆಂದು ಕಣ್ಣುಮುಚ್ಚಿ, ಟೇಬಲ್ ಮೇಲೆ ತಲೆ ಇಟ್ಟು ಕಪ್ಪು ಕಲ್ಲಿನಂತಾದರು. ಕಪ್ಪು ಟೇಬಲ್ ಕಪ್ಪು ಸಮುದ್ರದ ನೀರಿನಂತೆ ಕಂಡು, ತಾನು ಮುಳುಗಿ ಹೋಗುತ್ತಿದ್ದೇನೆನಿಸಿ, ಕಾಲುಗಳನ್ನು ನೆಲಕ್ಕೆ ಜೋರಾಗಿ ಬಡಿಯಹತ್ತಿದರು. ಅವರ ಹೆಂಡತಿ ಸಪ್ಪಳ ಕೇಳಿ ಕೋಣೆಯ ಒಳಗಡೆ ಬಂದು, "ಒಬ್ಬರೇ ಏನು ಮಾಡುತ್ತಿದ್ದೀರಿ?" ಎಂದು ಕೇಳುತ್ತ, "ಬೆಳಕು ಸರಿಯಾಗಿಲ್ಲ, ಈ ಬಲ್ಬು ಬದಲಿಸಬೇಕು," ಎಂದು ಹೇಳುತ್ತ ಮತ್ತೆ ಅಡುಗೆಯ ಮನೆಗೆ ಹೋದಳು. ರಾಘವಾಚಾರ್ಯರು ಸತ್ತ ಹಿರಿಯರು ಈ ರೀತಿ ಕಾಣಿಸಿಕೊಳ್ಳುವುದು ಅಪಶಕುನ ಎಂದು ತಿಳಿದರು. ಅವರಿಗೆ ಈ ಬಗ್ಗೆ ಸಾಕಷ್ಟು ಪರಿಹಾರದ ಮಾರ್ಗಗಳು ಗರುಡ ಪುರಾಣದಲ್ಲಿದ್ದದ್ದು ನೆನಪಾಯ್ತು. ಆ ನೆನಪುಗಳಲ್ಲಿ ಮುಳುಗಿ ಹೋದ ರಾಘವಾಚಾರ್ಯರು ಆಯಾಸದಲ್ಲಿ ಟೇಬಲ್ ಮೇಲೆಯೇ ನಿದ್ರೆ ಹೋದರು. ದೇಹಕ್ಕೆ ಕಲ್ಲು ಕಟ್ಟಿಕೊಂಡು ನೀರಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಗೆಳೆಯನೊಬ್ಬನ ಹೆಣ ಅವರ ಮನಸ್ಸಿನಲ್ಲಿ ಮೇಲೇಳಹತ್ತಿತು. ಫಕ್ಕನೇ ಎಚ್ಚರಾಗಿ ಎದ್ದು ಕೋಣೆಯಲ್ಲಿ ನೋಡಿದಾಗ, ಕೋಣೆಯ ತುಂಬೆಲ್ಲ ತಮ್ಮ ಮನೆತನದ ಎಲ್ಲ ಹಿರಿಯರು ಕುಳಿತಿದ್ದಾರೆ, ಅವರೆಲ್ಲ ಗಹಗಹಿಸಿ ನಗುತ್ತಿದ್ದಾರೆ. ಅವರಲ್ಲಿಯ ಒಬ್ಬರು ಹೊರಗೆ ಹೋಗಿ ಒಳಗೆ ಬಂದಂತೆನಿಸಿತು. ಅವರ ಕೈಯಲ್ಲಿ ಒಂದು ಗ್ರಂಥ ಇತ್ತು, ಅದರ ಒಂದೊಂದೇ ಪುಟಗಳನ್ನು ಅವರು ಹರಿಯುತ್ತಿದ್ದರು. ಉಳಿದವರು ಸುಡುತ್ತಿದ್ದರು. ಆ ಬೆಂಕಿ, ಆ ಹೊಗೆ ಉಸಿರುಗಟ್ಟುವಂತೆ ಮಾಡಿದಾಗ ರಾಘವಾಚಾರ್ಯರು ಯಾವ ಕಡೆಗೂ ನೋಡದೆ, ಕೋಣೆಯಿಂದ ಹೊರನಡೆದು ಜೋರಾಗಿ ಬಾಗಿಲ ಹಾಕಿದಾಗ, ನಡೆದು ಹೋಗುತ್ತಿದ್ದ ನೆಲ ಅದುರಿ ಭೂಮಿ ಬಾಯಿ ಬಿಟ್ಟಂತಾಗಿತ್ತು. ಮನಸ್ಸಿಗೆ ಸಮಾಧಾನವಿಲ್ಲದಂತೆನಿಸಿ ದೇವರ ಕೋಣೆಗೆ ಹೋಗಿ ಸಣ್ಣ ಪಣತಿಯಲ್ಲಿ ಎಣ್ಣೆ ಹಾಕಿ ದೀಪ ಹಚ್ಚಿದರು. ಆ ದೀಪದ ಬೆಳಕಿನಲ್ಲಿ ದೇವರ ಮೂರ್ತಿ ನೋಡಿದಾಗ, ಅದು ತನ್ನ ತೀರಿಕೊಂಡ ತಂದೆಯಂತೆ ಕಂಡಾಗ ತಕ್ಷಣ ಹೊರಗೆ ಬಂದು ದೇವರ ಕೋಣೆಯ ಕದ ಹಾಕಿದರು. ದೇವರ ಕೋಣೆಯಲ್ಲಿಯ ದೀಪದ ಮಂದಗಿನ ಬೆಳಕು ಬಾಗಿಲಗಳ ತೂತುಗಳಿಂದ ಹೊರ ಬರಲು ಪ್ರಾರಂಭಿಸಿತ್ತು.

ರಾಘವಾಚಾರ್ಯರು ಮನೆಯಿಂದ ಹೊರಗಡೆ ಅಂಗಳಕ್ಕೆ ಬಂದರು. ರಮೇಶ ಅವರ ಎದುರಿಗೇ ನಿಂತಿದ್ದ. "ರಾಯರೇ ಅತ್ತ ಕಡೆ ಗುಡ್ಡದ ಮೇಲಿನ ನನ್ನ ಮನೆ ನೋಡಿ, ನನ್ನ ತಂಗಿಯ ಸ್ವಾಗತಕ್ಕಾಗಿ ಸಿದ್ಧಗೊಳಿಸಿ ಬಂದಿದ್ದೇನೆ," ಎಂದು ಹೇಳಿ ಅಲ್ಲಿ ಬಹಳ ಹೊತ್ತು ನಿಲ್ಲಲಾರದೇ ಹೊರಟುಹೋದ. ರಾಘವಾಚಾರ್ಯರು ಏರಿಯ ಮೇಲಿನ ಮನೆಯ ಕಡೆ ನೋಡಿದರು. ಗುಡ್ಡದ ಏರಿಯ ಮನೆಯಲ್ಲಿ ಬೆಳಕು ಸುರಿದಂತಾಗಿತ್ತು. ಮನೆಗೆ ಮನೆಯೇ ಝಗಝಗ ಹೊಳೆಯುತ್ತಿತ್ತು. ಕಪ್ಪು ಸಮುದ್ರದಲ್ಲಿ ಬೆಳಗುವ ಸೂರ್ಯ ತೇಲಿದಂತಾಗಿತ್ತು. ಅಲ್ಲಿ ಉರಿಯುತ್ತಿದ್ದ ದೀಪಗಳು ಎಂದೂ ಆರದ ದೀಪಗಳಂತೆ ಕಾಣುತ್ತಿದ್ದವು. ಅದು ಯಾವ ಒಡಲಿನ ಅಗ್ನಿಯೋ ತಿಳಿಯಲಿಲ್ಲ. ಅಲ್ಲಿ ಬೆಳಕು ಮತ್ತು ಬೆಂಕಿ ಒಂದೇ ಆಗಿ ಕಂಗೊಳಿಸುತ್ತಿದ್ದವು. 'ತಂಗಿಯ ಮನೆ ಸ್ವಾಗತ' ಎನ್ನುವ ಅಕ್ಷರಗಳು ಹೊಳೆಯುತ್ತಿದ್ದವು. ರಾಘವಾಚಾರ್ಯರಿಗೆ ಒಂದುಕ್ಷಣ ದಿಕ್ಕು ತಪ್ಪಿದಂತಾಯಿತು. ಹೊರಳಿ ಓಣಿಯ ಕಡೆ ನೋಡುತ್ತಾರೆ. ಓಣಿಯ ಎಲ್ಲ ಮನೆಗಳ ಹೊರಗಡೆ ದೀಪಗಳನ್ನಿಟ್ಟಿದ್ದಾರೆ. 'ತಂಗಿಯ ಮನೆ ಸ್ವಾಗತ' ಎಂದು ಬರೆದಿದ್ದಾರೆ. ಊರಿಗೆ ಊರೇ ಬೆಳಗುತ್ತಿದೆ. ರಾಘವಾಚಾರ್ಯರು ಕೆಲವು ಹೊತ್ತು ಅವುಗಳನ್ನು ನೋಡುತ್ತಾ ಹಾಗೆಯೇ ನಿಂತರು. ಮನೆಯ ಒಳಗಡೆಗೆ ರಾಘವಾಚಾರ್ಯರ ಪತ್ನಿ